ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ

ರಾಣೇಬೆನ್ನೂರು.

ಸಿ.ಸಿ.ಸಂಖ್ಯೆ 595/2024

ಪಿ ಡಬ್ಲ್ಯೂ 4

ಸಿ ಡಬ್ಲ್ಯೂ 5

| | | |
|---|---|---|
| ಸಾಕ್ಷಿಯ ಹೆಸರು | : | ಗೀತಾ ತೆಗ್ಗಿಹಾಳ |
| ಗಂಡನ ಹೆಸರು | : | ಪ್ರಭಾಕರ |
| ವಯಸ್ಸು | : | 38 |
| ಉದ್ಯೋಗ | : | ಅಬಕಾರಿ ನಿರೀಕ್ಷಕರು, ಜಮಖಂಡಿ |
| ವಾಸಸ್ಥಳ | : | ಜಮಖಂಡಿ |

ದಿನಾಂಕಃ 16.02.2026. ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು 05-02-2024 ರಿಂದ 10-06-2024 ರ ವರೆಗೆ ರಾಣೇಬೆನ್ನೂರಿನಲ್ಲಿ ಅಬಕಾರಿ ಉಪಅಧಿಕ್ಷಕರ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕರಾಗಿ ಕೆಲಸ ಮಾಡಿರುತ್ತೇನೆ.

2. ದಿನಾಂಕಃ 18.05.2024 ರಂದು ಚಾಸಾ 1 ರವರಿಂದ ಪ್ರಕರಣದ ತನಿಖೆಗಾಗಿ ಕಡತವನ್ನು ಪಡೆದುಕೊಂಡು, ದಿನಾಂಕಃ22.05.2024 ರಂದು ರಾಸಾಯನಿಕ ಪರೀಕ್ಷೆಗಾಗಿ ಚಾಸಾ 4 ರವರ ಮೂಲಕ ಮುದ್ದೆ ಮಾಲುಗಳನ್ನು ಕಳುಹಿಸಿ, ದಿನಾಂಕಃ 06.06.2024 ರಂದು ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕಃ31.05.2024 ರಂದು ಹಲಗೇರಿ ಗ್ರಾಮ ಪಂಚಾಯತಿ ಅಧಿಕಾರಿಗಳಿಗೆ ಗುನ್ಹಾ ಜಾಗದ ಮಾಲೀಕತ್ವದ ಕುರಿತು ವರದಿ ಮತ್ತು ದಾಖಲೆಗಳನ್ನು ಕೇಳಿ ಪತ್ರ ಬರೆದು ದಿನಾಂಕಃ05.06.2024 ರಂದು ನೀಡಿದ ವರದಿ ಮತ್ತು ದಾಖಲೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಆರೋಪಿಯು ಕಛೇರಿಗೆ ಹಾಜರಾಗಿ ತನ್ನ ಸ್ವ ಖುಷಿ ಹೇಳಿಕೆ ನೀಡಿದ್ದು, ಮುಂದುವರೆದ ತನಿಖೆಗಾಗಿ ಕಡತವನ್ನು ಚಾಸಾ 6 ರವರಿಗೆ ವರ್ಗಾಯಿಸಿರುತ್ತೇನೆ.

3. ದಿನಾಂಕಃ 22.05.2024 ರ ಪತ್ರ ಮತ್ತು ಸಾಕ್ಷಿಯ ಸಹಿ ನಿಪಿ-7 ಮತ್ತು ನಿಪಿ-7 ಎ

ಎಂದು, ದಿನಾಂಕಃ 04.06.2024 ರ ರಾಸಾಯನಿಕ ಪರೀಕ್ಷಾ ವರದಿಯನ್ನು ನಿಪಿ–8 ಎಂದು, ದಿನಾಂಕಃ31.05.2024 ರ ಪತ್ರ ಮತ್ತು ಸಾಕ್ಷಿಯ ಸಹಿಯನ್ನು ನಿಪಿ–9 ಮತ್ತು ನಿಪಿ–9 ಎ ಎಂದು, ಪಂಚಾಯತಿ ಧೃಡೀಕರಣ ಪತ್ರವನ್ನು ನಿಪಿ– 10 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿ ಮತ್ತು ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಪಿರ್ಯಾದಿಯಲ್ಲಿ ತಿಳಿಸಿರುವ ವಿಷಯಗಳನ್ನು ನನ್ನ ಅಂತಿಮ ವರದಿಯಲ್ಲಿ ತೋರಿಸಿರುತ್ತೇನೆ ಎಂದರೆ ಸಾಕ್ಷಿಯು ಪ್ರಕರಣದ ತನಿಖೆಯ ವಿಷಯಗಳ ಕುರಿತು ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ಭದ್ರತಾ ಚೀಟಿ ಹರಿದ ಕುರಿತು ಪಿರ್ಯಾದಿಯಲ್ಲಿ ತಿಳಿಸಿರುತ್ತಾರೆ. ಗುನ್ನಾ ಜಾಗವು ಆರೋಪಿಯ ಮಾಲಿಕತ್ವಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಭದ್ರತಾ ಚೀಟಿಗಳನ್ನು ಹರಿದ ಕಾರಣ ಸದರಿ ಮುದ್ದೆ ಮಾಲುಗಳ ಲಾಟ್ ನಂಬರ್ ತಿಳಿದಿರುವುದಿಲ್ಲ. ಭದ್ರತಾ ಚೀಟಿಗಳ ಕುರಿತು ಪಂಚನಾಮೆಯಲ್ಲಿ ನಮೂದಿಸಿರುವುದಿಲ್ಲ. ನಾನು ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚುನಾವಣೆಯ ನಿಮಿತ್ಯ ನಾವು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.